INDIAN JOURNAL OF HISTORY AND ARCHAEOLOGY
ISSN (e):2582-225Xwww.ijha.in
Vol-8, Issue -05,September-October, 2026
Page No,01-06
Peer -Reviewed, Refereed Journal

# ಪತ್ರಿಕಾರಂಗದಲ್ಲಿ ಸಂದರ್ಶನದ ಸ್ವರೂಪ ಹಾಗೂ ಮಹತ್ವ

ಡಾ.ಕವಿತ ಬಿ.ಎನ್.[1]

ಭಾರತೀಯ ಕಾವ್ಯಮೀಮಾಂಸೆಯಲ್ಲಿ ಭಟ್ಟತೌತ ಪ್ರತಿಭೆಯನ್ನು ಕುರಿತಂತೆ "ಪ್ರಜ್ಞಾ ನವನವೋನ್ಮೇಷಶಾಲಿನೀ ಪ್ರತಿಭಾ" ಎಂದು ಹೊಸ ಹೊಸ ಭಾವನೆಗಳನ್ನು ಹೊಳೆಯಿಸುವ,ಹೊಸದನ್ನು ಕಾಣಿಸುವ,ಹೊಸದನ್ನು ನಿರ್ಮಿಸುವ ಪ್ರಜ್ಞೆಯೇ ಪ್ರತಿಭೆ ಎಂದಿದ್ದಾನೆ. ಮನುಷ್ಯ ತನ್ನ ಜ್ಞಾನದ ಪ್ರತಿಭಾ ಫಲದಿಂದ ಹೊಸ ಹೊಸ ಆವಿಷ್ಕಾರಗಳಲ್ಲಿ ತೊಡಗಿಕೊಂಡಂತೆ ಅದರ ಪ್ರತಿಫಲವಾಗಿ ಹೊಸತನ್ನು ನಿರ್ಮಿಸುವ ಪ್ರಜ್ಞೆಯ ಸ್ವರೂಪವಾಗಿ ವಿಜ್ಞಾನ,ತಂತ್ರಜ್ಞಾನಗಳು ರೂಪುಗೊಂಡವು.ಮಾನವನ ಅಭಿವ್ಯಕ್ತಿಯ ಮೂಲ ಮಾಧ್ಯಮ ಭಾಷೆಯಾಗಿದ್ದು, ಅದರ ಮುಂದುವರಿದ ಹಂತವಾಗಿ ರೂಪುಗೊಂಡ ಆಧುನಿಕ ಸಾಧನವೇ ಸಂವಹನ ಮಾಧ್ಯಮ.ಭಾಷೆ ಎಂಬುದು ಭಾವನೆಗಳನ್ನು,ಅನುಭವಗಳನ್ನು ಅಭಿವ್ಯಕ್ತಗೊಳಿಸವ ಯಾದೃಚ್ಛಿಕ ಧ್ವನಿಸಂಕೇತಗಳ ಒಂದು ವ್ಯವಸ್ಥೆ.ಇದರ ಮೂಲತತ್ವ ವಾಕ್.ಈ ವಾಕ್ ರೂಪವೇ ಕಾಲಾಂತರದಲ್ಲಿ ಶ್ರವಣ,ಚಾಕ್ಷು ಸಂವಹನ ಮಾಧ್ಯಮಗಳಾಗಿ ಅವುಗಳೇ ಸಮೂಹ ಮಾಧ್ಯಮಗಳಾಗಿ ಆಧುನಿಕ ಪ್ರಪಂಚವನ್ನು ಇಂದು ಬೆರಗುಗೊಳಿಸುವಂತೆ ಕಾರ್ಯ ನಿರ್ವಹಿಸುತ್ತಿದೆ.

ಪ್ರಾಚೀನ ಕಾಲದಲ್ಲಿನ ಪಾರಂಪರಿಕ ಸಂವಹನ ಸಾಧನ ವಿಧಾನಗಳಿಂದ ಪ್ರಾರಂಭವಾಗಿ ಪ್ರಸ್ತುತದವರೆಗಿನ ತಂತ್ರಜ್ಞಾನ ಮಜಲುಗಳನ್ನು ಗ್ರಹಿಸಿದರೆ ಆಧುನಿಕ ತಂತ್ರಜ್ಞಾನದ ರೂಪವಾಗಿ ಮೂರ್ತಗೊಂಡು ಯಶಸ್ವಿಯಾಗಿ ಒಂದು ಮಾಯಾ ಜಗತ್ತನ್ನೇ ಸೃಷ್ಟಿಸಿದಂತೆ ಕಣ್ಣೆದುರಿಗೆ ಬಂದು ನಿಂತಿರುವುದು ಆಧುನಿಕ ಸಂವಹನ ಮಾಧ್ಯಮಗಳು.ಆಧುನಿಕ ಕಾಲದಲ್ಲಿ ಇದರ ಪರಿಣಾಮ ಮತ್ತು ಬಳಕೆ ವೈವಿಧ್ಯಮಯವಾಗಿ ಇಂದಿನ ದೈನಂದಿನ ಚಟುವಟಿಕೆಗಳ ಪ್ರಾರಂಭವೇ ಈ ಸಂವಹನ ಮಾಧ್ಯಮಗಳಿಂದ ಆಗುವ ಅನಿವಾರ್ಯತೆಯ ಸಂದರ್ಭಕ್ಕೆ ಮನುಷ್ಯನನ್ನು ತಂದು ನಿಲ್ಲಿಸಿದೆ ಎಂದರೆ ತಪ್ಪಾಗಲಾರದು.ಈ ಮಾಧ್ಯಮಗಳಿಗೆ ಅದರದ್ದೇ ಆದ ಇತಿಮಿತಿಗಳಿದ್ದು ಅದರ ನಡುವೆಯೇ ಇಂದು ವಿಶ್ವದ ಮಾಹಿತಿಯನ್ನು ಕುಳಿತ ಸ್ಥಳದಲ್ಲಿಯೇ ತಿಳಿಯುವ ಸಾಧನವಾಗಿ ಪ್ರಪಂಚವನ್ನೇ ಏಕತ್ರಗೊಳಿಸಿ ಸಂಪರ್ಕ ಸಾಧನಗಳಾಗಿ

[1].ಸಹ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಶ್ರೀರಂಗಪಟ್ಟಣ.

ಆಧುನಿಕ ಯುಗವೊಂದನ್ನು ಸೃಷ್ಟಿಸಿರುವುದೇ ಈ ಸಂವಹನ ಮಾಧ್ಯಮ.ಇಂತಹ ಸಂವಹನ ಮಾಧ್ಯಮದ ಒಂದು ಕಾರ್ಯರೂಪದ ಭಾಗವೇ ಸಂದರ್ಶನ.

ಸಂದರ್ಶನವೆಂಬುದು ಒಂದು ರಚನಾತ್ಮಕ ಸಂಭಾಷಣೆಯ ಸ್ವರೂಪವಾಗಿದ್ದು, ಸಂವಹನ ಮಾಧ್ಯಮಗಳಲ್ಲಿ ಪ್ರಮುಖ ಪಾತ್ರವನ್ನು ಇದು ನಿರ್ವಹಿಸುತ್ತದೆ. ಒಬ್ಬ ವ್ಯಕ್ತಿಯನ್ನು ನಿರ್ದಿಷ್ಟ ಉದ್ದೇಶಕ್ಕಾಗಿ ಮಾತನಾಡಿಸುವ ಒಂದು ವಿಧಾನವೇ ಸಂದರ್ಶನ.ಇದನ್ನು ಇಂಗ್ಲೀಷ್‌ನಲ್ಲಿ 'ಇಂಟರ್ ವ್ಯೂ' ಎಂದು ಕರೆಯಲಾಗುತ್ತದೆ.ಈ ಶಬ್ದದ ಮೂಲ ರೂಪ ಲ್ಯಾಟಿನ್ ಭಾಷೆಯದ್ದು.ಲ್ಯಾಟಿನ್ ಭಾಷೆಯಲ್ಲಿ 'ಇಂಟರ್ ವ್ಯೂ' ಎಂಬುದಕ್ಕೆ ಪರಸ್ಪರ ನೋಡುವುದು,ನಡುವೆ ನೋಡುವುದು ಎಂಬರ್ಥಗಳಿವೆ. ಕನ್ನಡದಲ್ಲಿ ಸಂದರ್ಶನದ ಅರ್ಥವನ್ನು ಗಮನಿಸಿದರೆ ಒಬ್ಬರೊಡನೆ ಇನ್ನೊಬ್ಬರು ಪರಸ್ಪರ ದರ್ಶನಕ್ಕೊಳಪಡಿಸುವ ಮಾದರಿಯೇ ಆಗಿದೆ.ಹಾಗಾಗಿ ಸಂದರ್ಶನವೆಂಬುದು 'ಪರಸ್ಪರ ದರ್ಶನ' ಎಂಬ ಅರ್ಥವನ್ನು ನಿರ್ವಚಿಸುತ್ತದೆ.

ಸಂದರ್ಶನದ ಸ್ವರೂಪ ಸಾಮಾನ್ಯವಾಗಿ ಉತ್ತರಗಳನ್ನು ನಿರೀಕ್ಷಿಸುವ ಪ್ರಶ್ನೆಗಳ ಮಾದರಿಯಲ್ಲಿರುತ್ತದೆ. ಪ್ರಶ್ನೆಗಳನ್ನು ಕೇಳುವ ವ್ಯಕ್ತಿಯನ್ನು ಸಂದರ್ಶಕರು ಎಂದೂ ಹಾಗೂ ಉತ್ತರ ನೀಡುವವರನ್ನು ಸಂದರ್ಶಿತರು ಎಂದು ಸಹಜವಾಗಿ ಸಂಬೋಧಿಸಲಾಗುತ್ತದೆ. ಒಬ್ಬ ವ್ಯಕ್ತಿಯಿಂದ ಮಾಹಿತಿ ಪಡೆದುಕೊಳ್ಳಲು,ಅರ್ಹತೆಗಳನ್ನು ಮೌಲ್ಯಮಾಪನ ಮಾಡಲು ಇಬ್ಬರು ಅಥವಾ ಅದಕ್ಕಿಂತ ಅಧಿಕ ಜನರ ನಡುವೆ ನಡೆಯುವ ಒಂದು ರಚನಾತ್ಮಕ ಸಂಭಾಷಣೆಯನ್ನು ಸಂದರ್ಶನವೆಂದು ಕರೆಯಲಾಗುತ್ತದೆ.

ಈ ಸಂದರ್ಶನದಲ್ಲಿ ಪತ್ರಿಕಾ ಸಂದರ್ಶನವು ಸಮೂಹ ಮಾಧ್ಯಮಗಳಲ್ಲಿ ಪ್ರಮುಖವಾದದ್ದು.ವರದಿ ಮಾಡುವುದು ಪತ್ರಕರ್ತರ ಮುಖ್ಯವಾದ ಕಾರ್ಯ.ಆ ಕಾರ್ಯ ನಿರ್ವಹಣೆಯು ನಿಖರವಾಗಿ,ಸ್ಪಷ್ಟವಾಗಿ ನೆರವೇರಿದಲ್ಲಿ ಪತ್ರಿಕೆಯು ಸಹಜವಾಗಿಯೇ ಸಮಾಜದ ಓದುಗ ವಲಯವನ್ನು ವೇಗಗತಿಯಲ್ಲಿ ತಲುಪಲು ಯಶಸ್ವಿಯಾಗುತ್ತದೆ. ಪತ್ರಕರ್ತರು ತಮಗೆ ದೊರೆತ ಸುದ್ದಿಯ ಬಗೆಗೆ ಹೆಚ್ಚಿನ ಮಾಹಿತಿಯನ್ನು ಸಂಗ್ರಹಿಸಲು ಇರುವ ಮಾರ್ಗವೆಂದರೆ ಸಂದರ್ಶನ. ಈ ಸಂದರ್ಶನವೇ ನೈಜ ಸಂಗತಿಯನ್ನು ನಿಖರವಾಗಿ ತಿಳಿಸುವ ಮಾರ್ಗ.ಹಾಗಾಗಿ ನಿಖರ ಮಾಹಿತಿಗೆ ಪತ್ರಕರ್ತರು ಈ ಮಾರ್ಗವನ್ನು ಬಹುತೇಕ ಆಯ್ಕೆ ಮಾಡಿಕೊಳ್ಳುತ್ತಾರೆ.ಹಾಗಾಗಿ ಪತ್ರಿಕಾ ಕಛೇರಿಗೆ ಬರುವ ಸುದ್ದಿಗಳನ್ನು ಹೊರತುಪಡಿಸಿ,ಇತರೆ ಸುದ್ದಿಗಳನ್ನು ಪತ್ರಕರ್ತರು ಸಂಗ್ರಹಿಸಲು ಕ್ರಮಿಸುವ ಮಾರ್ಗವೇ ಸಂದರ್ಶನ.ವರದಿಗಳ ನೈಜ ನಿರೂಪಣೆಯೇ ಈ ಸಂದರ್ಶನಕ್ಕೆ ಮುಖ್ಯ ಆಕರವಾಗಿದ್ದು,ಮಾಧ್ಯಮಗಳ ಬಹುತೇಕ ಸುದ್ದಿಗಳು ಪ್ರಕಟವಾಗುವ ಮಾದರಿ ಸಂದರ್ಶನವೇ ಆಗಿದೆ.

ಹಾಗಾಗಿ ಪತ್ರಕರ್ತರು ಅಭಿಪ್ರಾಯಗಳನ್ನು ಕಲೆಹಾಕಲು ಸಾರ್ವಜನಿಕರನ್ನು,ಆ ಕ್ಷೇತ್ರದ ಪರಿಣಿತರನ್ನು ಅಥವಾ ಆ ವಿಷಯದ ಬಗೆಗೆ ಕಾನೂನುಬದ್ಧವಾದ ನಿಪುಣತೆಯನ್ನು ಹೊಂದಿರುವ ಅಥವಾ ನಿಖರವಾದ ಮಾಹಿತಿಯನ್ನು ನೀಡಬಲ್ಲ ವ್ಯಕ್ತಿಗಳನ್ನು ಸಂದರ್ಶಿಸುವುದು ಅತ್ಯಗತ್ಯ. ಆ ಮೂಲಕ ನಿಖರವಾದ ಮಾಹಿತಿ ಜನರನ್ನು ತಲುಪುವ ಮಾಧ್ಯಮದ ಉದ್ದೇಶ ಸಕಾರಗೊಂಡಂತೆ ಆಗುತ್ತದೆ.ಇಂಥ ಸಂದರ್ಶನ ಜನರಿಗೆ ಮಾಹಿತಿಯನ್ನಷ್ಟೇ ಒದಗಿಸದೇ ಅವರಲ್ಲಿ ವಿಚಾರವಂತಿಕೆಗೂ ಕಾರಣೀಭೂತವಾಗುತ್ತದೆ. ಹಾಗಾಗಿ ಪತ್ರಿಕಾ ಸಂದರ್ಶನವನ್ನು ಪ್ರಮುಖವಾಗಿ ಎರಡು ಬಗೆಯನ್ನು ಕಾಣಬಹುದು

1 ವ್ಯಕ್ತಿ ಸಂದರ್ಶನ

2 ಜನಾಭಿಪ್ರಾಯ ಸಂದರ್ಶನ

ಇದರಲ್ಲಿ ಎರಡು ಮುಖ್ಯ ಸಂದರ್ಶನಗಳು ಅದರದ್ದೇ ಆದ ನಿರೂಪಣೆಯಲ್ಲಿ ಮಾಹಿತಿಯನ್ನು ನೀಡುವ ಮೂಲಕ ಕಾರ್ಯ ನಿರ್ವಹಿಸುತ್ತದೆ.

**1 ವ್ಯಕ್ತಿ ಸಂದರ್ಶನ :**

ಪತ್ರಕರ್ತನು ಸುದ್ದಿ ಸಂಪಾದಿಸುವಾಗ ವ್ಯಕ್ತಿಗಳನ್ನು ಸಂದರ್ಶಿಸಿ ಮಾಧ್ಯಮಕ್ಕೆ ವರದಿ ಮಾಡಿದರೆ ಅದನ್ನು ವ್ಯಕ್ತಿ ಸಂದರ್ಶನ ಎನ್ನಲಾಗುತ್ತದೆ.ವ್ಯಕ್ತಿ ಸಂದರ್ಶನವನ್ನು ಏಕವ್ಯಕ್ತಿ ಸಂದರ್ಶನ ಹಾಗೂ ಗುಂಪು ವ್ಯಕ್ತಿ ಸಂದರ್ಶನ ಅಥವಾ ಸಮೂಹ ಸಂದರ್ಶನ ಎಂದು ಎರಡು ವಿಧಗಳಾಗಿ ವಿಂಗಡಿಸಬಹುದು.ಸಂದರ್ಶನಕ್ಕೆ ಸಾಮಾನ್ಯವಾಗಿ ಪ್ರಸ್ತುತ ಸುದ್ದಿಯಲ್ಲಿರುವ ವ್ಯಕ್ತಿಗಳನ್ನು ಅಥವಾ ಪ್ರಮುಖ ವ್ಯಕ್ತಿಗಳನ್ನು ಆಯ್ಕೆ ಮಾಡಿಕೊಂಡು ಸಂದರ್ಶನಕ್ಕೊಳಪಡಿಸಲಾಗುತ್ತದೆ. ಪ್ರಮುಖವಾಗಿ ಸಾಹಿತಿಗಳು, ರಾಜಕಾರಣಿಗಳು, ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿದ ಸಾಧಕರು, ಪ್ರಶಸ್ತಿ ವಿಜೇತರು ಅಸಾಧಾರಣ ಸೇವೆ ಸಲ್ಲಿಸಿ ಸಮಾಜಕ್ಕೆ ಕೊಡುಗೆ ನೀಡಿದವರು ಮುಂತಾದವರು ಸಂದರ್ಶನದಲ್ಲಿ ಪ್ರಮುಖರಾಗುತ್ತಾರೆ. ಹಾಗಾಗಿ ಅಂತಹ ವ್ಯಕ್ತಿಗಳ ಸಂದರ್ಶನವನ್ನು ಸಾಮಾನ್ಯವಾಗಿ ಸುದ್ದಿ ಅಂಕಣದಲ್ಲಿ ಪ್ರಕಟಿಸುವುದು ಅಪರೂಪವಾಗಿರುತ್ತದೆ. ಕೆಲವೊಮ್ಮೆ ಅತಿ ಮುಖ್ಯವಾದ ವರದಿ ಮಾಡಬೇಕಾದ ಅವಶ್ಯಕತೆಯಿರುವ ವೇಳೆಯಲ್ಲಿ ವ್ಯಕ್ತಿಗಳ ಸಂದರ್ಶವನ್ನು ಮುಖಪುಟದಲ್ಲಿ ಪ್ರಕಟಿಸಲಾಗುತ್ತದೆ. ಬಹುತೇಕ ಸಂದರ್ಭಗಳಲ್ಲಿ ವ್ಯಕ್ತಿ ಸಂದರ್ಶವನ್ನು ಪತ್ರಿಕೆಯ ಪುರವಣಿಗಳಲ್ಲಿ ಪ್ರಕಟಿಸುವ ಕಾರ್ಯ ನಡೆಯುತ್ತದೆ.ಆಯಾಯ ಕ್ಷೇತ್ರದಲ್ಲಿ ಅಸಾಧಾರಣ ಸಾಧನೆ ಮಾಡಿದ ಹಾಗೂ ಅನುಭವವಿರುವವರನ್ನು ಆಯಾ ನಿಗದಿತ ಪುರವಣಿಯಲ್ಲಿ ಪ್ರಕಟ ಮಾಡಲಾಗುತ್ತದೆ.ಸಿನಿಮಾ ಕ್ಷೇತ್ರಕ್ಕೆ ಸಂಬಂಧಿಸಿದ ಸಂದರ್ಶನವನ್ನು ಸಿನಿಮಾ ಪುರವಣಿಯಲ್ಲಿ

ಪ್ರಕಟಿಸುವಂತೆ,ಕ್ರೀಡಾ ಪುರವಣಿ.ಮಹಿಳಾ ಪುರವಣಿ,ವಾಣಿಜ್ಯ ಪುರವಣಿ,ಆರೋಗ್ಯ ಪುರವಣಿ,ಸಾಹಿತ್ಯ ಪುರವಣಿ ಎಂದು ಆಯಾ ಕ್ಷೇತ್ರಕ್ಕೆ ಸಂಬಂಧಿಸಿದ ಸಂದರ್ಶನಗಳು ಪ್ರಕಟಗೊಳ್ಳುತ್ತದೆ.ಇಲ್ಲಿ ಏಕವ್ಯಕ್ತಿ ಅಥವಾ ಗುಂಪು ವ್ಯಕ್ತಿಗಳ ಸಂದರ್ಶನದಲ್ಲಿ ದಾಖಲಾದ ಮಾಹಿತಿಗಳು ಪ್ರಕಟಗೊಳ್ಳುತ್ತವೆ.

**2. ಜನಾಭಿಪ್ರಾಯ ಸಂದರ್ಶನ:**

ಜನಾಭಿಪ್ರಾಯ ಸಂದರ್ಶನವು ಬಹುತೇಕ ಜನಸಾಮಾನ್ಯರ ಜೀವನಕ್ಕೆ ಸಂಬಂಧಿಸಿದ ಸಂಗ್ರಹಣಾ ಭಾಗವಾಗಿರುತ್ತದೆ.ಎಲ್ಲಾ ವರ್ಗದ ಜನರ ಸಂದರ್ಶನದ ಮೂಲಕ ಅಭಿಪ್ರಾಯ ಸಂಗ್ರಹಣೆಯ ಕಾರ್ಯ ನಡೆದು ಸಾರ್ವಜನಿಕವಾಗಿ ಮಹತ್ವದ ವಿಷಯಗಳನ್ನು ತಲುಪಿಸಲು ಸಾಧ್ಯವಾಗುತ್ತದೆ.ಪ್ರಕೃತಿ ವಿಕೋಪಗಳು,ನಾಗರಿಕ ಸೌಲಭ್ಯಗಳು,ಹೊಸ ಕಾನೂನುಗಳು, ಚುನಾವಣೆ, ರಾಜಕಾರಣಿಗಳ ಕಾರ್ಯಕ್ಷಮತೆ ಮುಂತಾದವುಗಳ ಬಗ್ಗೆ ಜನಾಭಿಪ್ರಾಯ ಅರಿಯುವುದು ದೇಶದ ಅಭಿವೃದ್ಧಿಯ ಹಿನ್ನೆಲೆಯಲ್ಲಿಯೂ ಮುಖ್ಯವಾದದ್ದು.

ಇಂಥ ಸಂದರ್ಶನ ಕಾರ್ಯದಲ್ಲಿ ತೊಡಗಿಸಿಕೊಳ್ಳುವ ಪತ್ರಕರ್ತರು ಕೆಲವು ಗುಣಲಕ್ಷಣಗಳನ್ನು ಹೊಂದಿರುವುದು ಅವಶ್ಯಕ. ಅವರು ದೃಢಚಿತ್ತದಿಂದ ಕೂಡಿದವರಾಗಿ ವಾಕ್ಚಾತುರ್ಯದಿಂದಿದ್ದರೆ ಸಂದರ್ಶನದ ಉದ್ದೇಶ ಫಲಿಸುತ್ತದೆ.ಈ ಸಂದರ್ಭದಲ್ಲಿ ಶಿಷ್ಟಾಚಾರದ ಅರಿವಿನೊಂದಿಗೆ ವಿನಯವಂತಿಕೆ, ಸಹನೆ,ವಿನೋದ ಪ್ರಜ್ಞೆಯ ಜಾಣ್ಮೆ, ಸಂದರ್ಶನ ಯಶಸ್ವಿಯಾಗಿ ನಡೆಯಲು ಸಹಾಯಕವಾಗುತ್ತದೆ.ಈ ಎಲ್ಲಾ ಎಚ್ಚರಿಕೆಗಳು ಸಂದರ್ಶನದ ಘನತೆಯು ಮತ್ತಷ್ಟು ಶೋಭಿಸುವಂತೆ ಮಾಡುತ್ತದೆ.

ಆ ನಿಟ್ಟಿನಲ್ಲಿ ಸಂದರ್ಶನ ಪೂರ್ವ ಸಿದ್ಧತೆಯು ಅತ್ಯಂತ ಪ್ರಮುಖ ಪಾತ್ರವನ್ನು ನಿರ್ವಹಿಸುತ್ತದೆ. ಪೂರ್ವ ಸಿದ್ಧತೆಗಳಿಂದ ಕೂಡಿದ ಸಂದರ್ಶನ ಅತ್ಯಂತ ಉತ್ತಮವಾದ ಸಂದರ್ಶನವಾಗುತ್ತದೆ ಎಂಬುದರಲ್ಲಿ ಸಂದೇಹವೇ ಇಲ್ಲ. ಇಂಥ ಸಂದರ್ಶನವು ಸಮಾಜದಲ್ಲಿ ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿದ ವ್ಯಕ್ತಿಗಳನ್ನು ಸಮಗ್ರವಾಗಿ ಪರಿಚಯಿಸುವುದಲ್ಲದೇ ಸಮಾಜಕ್ಕೆ ಸಲ್ಲಿಸಿರುವ ಕೊಡುಗೆಗಳನ್ನು ದಾಖಲಿಸಲು ಅನುಕೂಲವಾಗುತ್ತದೆ. ಸಮಾಜಕ್ಕೆ ಮಾದರಿ ವ್ಯಕ್ತಿಗಳನ್ನು ಪರಿಚಯಿಸುವಲ್ಲಿ ಅವರ ಪ್ರೇರಣೆ, ಪ್ರಭಾವಗಳು ಮುಂದೆ ಸಾಧನೆ ಮಾಡ ಬಯಸುವ ವ್ಯಕ್ತಿಗಳಿಗೆ ಮಾರ್ಗದರ್ಶನವಾಗುತ್ತದೆ.

ಸಂದರ್ಶಿತ ವ್ಯಕ್ತಿಯ ಅರ್ಹತೆ,ಸ್ಥಾನಮಾನ,ಅವರ ಸಾಧನೆ ಹಾಗೂ ಸಮಾಜಕ್ಕೆ ನೀಡಿರುವ ಕೊಡುಗೆ ಬಗೆಗೆ ಪೂರ್ವ ತಿಳುವಳಿಕೆಯಿರುವುದು ಉತ್ತಮವಾದದ್ದು.ಅವುಗಳ ಆಧಾರದಲ್ಲಿ ಪ್ರಶ್ನಾವಳಿಗಳು ರೂಪುಗೊಳ್ಳುವುದು ಸರಿಯಾದ ಕ್ರಮ.ಹೀಗೆ ನಿರ್ದಿಷ್ಟ ವಿಷಯದ ಬಗ್ಗೆ ಸಂದರ್ಶಿತರಿಂದ ಅಥವಾ ಪ್ರತಿಸ್ಪಂದಕರಿಂದ ಮಾಹಿತಿ ಸಂಗ್ರಹಿಸಲು ಬಳಸುವ ಪ್ರಶ್ನೆಗಳ ಸರಣಿಯನ್ನೇ ಪ್ರಶ್ನಾವಳಿ ಎಂದು ಕರೆಯಲಾಗುತ್ತದೆ.ಹೀಗೆ ಪತ್ರಕರ್ತರು ಯಾರನ್ನು ಪ್ರಶ್ನೆಗೆ ಒಳಪಡಿಸಿಕೊಳ್ಳಲಾಗಿದೆ,ಏಕೆ,ಹೇಗೆ,ಯಾವಾಗ,ಎಲ್ಲಿ

ಈ ಎಲ್ಲಾ ಅಂಶಗಳು ಈ ಸಂದರ್ಭದಲ್ಲಿ ಅತ್ಯಂತ ಮುಖ್ಯವಾಗಿರುತ್ತದೆ. ಇಂಥದರ ಬಗೆಗಿನ ಸಂಪೂರ್ಣ ಅರಿವಿನೊಂದಿಗೆ ಪತ್ರಕರ್ತರು ಅಥವಾ ವರದಿಗಾರರು ವ್ಯಕ್ತಿಗಳ ಸಂದರ್ಶನ ಸಂದರ್ಭದಲ್ಲಿ ಕೇಳುವ ಪ್ರಶ್ನಾವಳಿಯನ್ನೇ ಸಂದರ್ಶನ ಪ್ರಶ್ನಾವಳಿ ಎನ್ನಲಾಗುತ್ತದೆ.

ಸಂದರ್ಶನದ ಸಂದರ್ಭದಲ್ಲಿ ಪ್ರಶ್ನಾವಳಿಯನ್ನು ರೂಪಿಸುವುದು ಹಾಗೂ ಅದಕ್ಕೆ ಪೂರಕವಾದ ಪೂರ್ವ ಸಿದ್ಧತೆಗಳು ನಿಖರವಾಗಿರುವುದು ಅತ್ಯಂತ ಮುಖ್ಯವಾದ ಹಂತವಾಗಿದ್ದು,ಆ ಪ್ರಶ್ನೆಗಳು ಮಾಹಿತಿಯ ಕ್ರೂಢೀಕರಣಕ್ಕೆ ಪೂರಕವಾಗಿಯೇ ಸಿದ್ಧಗೊಳ್ಳಬೇಕು.ಹಾಗೆ ಸಿದ್ಧಗೊಂಡ ಮಾಹಿತಿಯು ದಾಖಲೀಕರಣಗೊಳ್ಳವುದು ಮತ್ತೊಂದು ಹಂತವಾಗಿದ್ದು, ಇಂತಹ ಮಾಹಿತಿಯ ದಾಖಲೀಕರಣ ಸ್ವರೂಪಗಳ ಬಗೆಗೆ ಸಂದರ್ಶನ ತೆಗೆದುಕೊಳ್ಳಲಿರುವ ಸಂದರ್ಶಕರಿಗೆ ಅದರ ಬಗೆಗೆ ಸಂಪೂರ್ಣ ತರಬೇತಿ ಹಾಗೂ ಅನುಭವ ಸಂದರ್ಶನದ ಉದ್ದೇಶವನ್ನು ಯಶಸ್ವಿಯಾಗಿ ಫಲಿತಗೊಳಿಸುತ್ತದೆ.ಹಾಗಾಗಿ ಅನುಭವಿ ವ್ಯಕ್ತಿಗಳು ಅತ್ಯಂತ ಪ್ರಮುಖ ಪಾತ್ರವನ್ನು ಇಲ್ಲಿ ನಿರ್ವಹಿಸುವುದರಿಂದ ಪ್ರತಿ ಹಂತದಲ್ಲಿಯೂ ಎಚ್ಚರಿಕೆಯ ಮಾತುಗಳು ಮಾಹಿತಿ ಸಂಗ್ರಹಣೆಯ ಕಾರ್ಯಕ್ಕೆ ಅನುಕೂಲವಾಗುತ್ತದೆ.ಮಾಹಿತಿದಾರರು ಅಥವಾ ಸಂದರ್ಶಿತರೊಂದಿಗೆ ಪರಿಚಯಿಸಿಕೊಳ್ಳವ ಬಗೆ,ಅವರ ವಿಶ್ವಾಸವನ್ನು ಗಳಿಸಿಕೊಳ್ಳವ ರೀತಿ,ಸಂದರ್ಶನಕ್ಕೆ ಒಳಪಡಿಸುತ್ತಿರುವ ಮೂಲ ಉದ್ದೇಶ,ಅವರ ವೈಯಕ್ತಿಕ ವಿವರ ಮತ್ತು ಆ ಮಾಹಿತಿಯನ್ನು ಸಂಬಂಧಪಟ್ಟವರಿಗೆ ತಲುಪಿಸುವ ಕಾರ್ಯ ಅಷ್ಟೇ ಪ್ರಮುಖ ಪಾತ್ರವನ್ನು ನಿರ್ವಹಿಸುತ್ತದೆ.

ಇಂಥ ಪ್ರಶ್ನಾವಳಿ ಸಂದರ್ಭದಲ್ಲಿ ಭಾಷೆ ಸ್ಪಷ್ಟತೆಯಿಂದ ಕೂಡಿದ್ದಾಗಿರಬೇಕು. ಸಂದರ್ಶಿತರು ಗೊಂದಲಕ್ಕೆ ಒಳಗಾಗಲು ಎಡೆಮಾಡಿಕೊಡದಂತೆ ಅತ್ಯಂತ ಸೂಕ್ಷ್ಮತೆಯಿಂದ ಮಾಹಿತಿ ಕಲೆ ಹಾಕುವ ದೃಷ್ಟಿಯಲ್ಲಿ ಪ್ರಶ್ನೆಗಳಿರುವಂತೆ ಎಚ್ಚರಿಕೆ ವಹಿಸಬೇಕು.ಪ್ರಮುಖವಾಗಿ ಸಂದರ್ಶನಕ್ಕೆ ಒಳಪಡುವ ವ್ಯಕ್ತಿಗಳ ವ್ಯಕ್ತಿತ್ವವನ್ನು ಸಮಗ್ರವಾಗಿ ಕಟ್ಟಿಕೊಡುವ ಪ್ರಶ್ನೆಗಳಿದ್ದು,ಸ್ಪಷ್ಟ ಉತ್ತರಗಳ ನಿರೀಕ್ಷಿಸುವಲ್ಲಿ ಯಶಸ್ವಿಯಾಗುವಂತೆ ಅವುಗಳು ತಯಾರಾಗಿರಬೇಕು.ನಿಖರವಾದ ಮಾಹಿತಿ ಕಲೆ ಹಾಕುವಂತೆ ಹಾಗೂ ವಾಸ್ತವಕ್ಕೆ ಹತ್ತಿರವಾಗಿರುವಂತೆ ಪ್ರಶ್ನೆಗಳು ರೂಪಿತವಾಗಿರಬೇಕಾಗುತ್ತದೆ.ಸಂದರ್ಶಿಸುವ ವ್ಯಕ್ತಿಗಳ ಸಾಧನೆ,ಸಮಾಜಕ್ಕೆ ಅದರಿಂದಾಗುವ ಉಪಯುಕ್ತತೆ,ಅವರ ಬಗೆಗೆ ಬಂದಿರುವ ಟೀಕೆ–ಟಿಪ್ಪಣಿ,ಪ್ರಶಂಸೆ,ಅವರ ಮುಂದಿನ ಯೋಜನೆಗಳಿಗೆ ಸಂಬಂಧಿಸಿದ ಪ್ರಶ್ನೆಗಳು ರೂಪಿಸುವುದು ಉತ್ತಮ ಮತ್ತು ಸೂಕ್ತವಾದದ್ದು.

ಇಂದು ಪತ್ರಿಕಾರಂಗ ಒಂದು ಪ್ರಬಲ ಓದುಗ ವಲಯವನ್ನು ನಿರ್ಮಿಸಿಕೊಂಡಿದೆ ಎಂದರೆ ಅದಕ್ಕೆ ಸುದ್ದಿ ಒಂದೇ ಕಾರಣವಲ್ಲ.ಅದರೊಡನೆ ಇಂಥ ಸಂದರ್ಶನ ಹಾಗೂ ಸಂದರ್ಶನದಿಂದ ಪ್ರಕಟಗೊಳ್ಳುವ ಮಾಹಿತಿ ಕೂಡ ಓದುಗ ವಲಯದ ವ್ಯಾಪ್ತಿಯನ್ನು ವಿಸ್ತರಿಸುತ್ತದೆ ಎಂಬುದು ಗಮನಾರ್ಹ ಹಾಗಾಗಿ ಪತ್ರಿಕಾ ರಂಗದ ಯಶಸ್ಸಿಗೆ ಸಂದರ್ಶನವು ಕೂಡ ಒಂದು ಮಹತ್ವದ ಪಾತ್ರವನ್ನು ವಹಿಸಿದೆ.

## ಪರಾಮರ್ಶನ ಗ್ರಂಥಗಳು


1. ಆಧುನಿಕ ಸಂವಹನ ಮಾಧ್ಯಮಗಳು ಮತ್ತು ಕನ್ನಡದ ಅಭಿವೃದ್ಧಿ–ಡಾ.ಟಿ.ಸಿ.ಪೂರ್ಣಿಮಾ, ಪ್ರಸಾರಾಂಗ,ಕನ್ನಡ ವಿಶ್ವವಿದ್ಯಾಲಯ,ಹಂಪಿ
2. ಪತ್ರಿಕೋದ್ಯಮ–ಜಿ.ಎನ್.ರಂಗನಾಥ ರಾವ್,ಕಾಮಧೇನು ಪುಸ್ತಕ ಭವನ,ಬೆಂಗಳೂರು
3. ಸುದ್ದಿ ಸಂಪಾದನೆ–ಪ್ರೊ.ಕೆ.ಜೆ.ಜೋಸೆಫ್